ಜೆ. ಎಂ. ಎಫ್. ಸಿ. II, ನ್ಯಾಯಾಲಯ, ಹುಬ್ಬಳ್ಳಿ.
ಸಿ.ಸಿ. ನಂಃ 2496/2022

PW: 04
CW: 02

| | |
|---|---|
| ಸಾಕ್ಷಿದಾರರ ಹೆಸರು | : ದೇವರೆಡ್ಡಿ ಚನ್ನರೆಡ್ಡಿ |
| ತಂದೆಯ ಹೆಸರು | : ವೆಂಕರೆಡ್ಡಿ |
| ವಯಸ್ಸು | : 50 ವರ್ಷ |
| ಉದ್ಯೋಗ | : ಶೇತ್ಕಿ |
| ವಾಸಸ್ಥಳ | : ಉಮಚಗಿ |

ಪ್ರಮಾಣ ವಚನವನ್ನು ಬೋದಿಸಲಾಯಿತು. ದಿನಾಂಕಃ 10.03.2026

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ಸಾಕ್ಷಿಯು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-4 ಹಾಗೂ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ಹಾಗೂ 3 ಪೊಟೋಗಳಲ್ಲಿ ತಾನಿರುವುದಾಗಿ ನೋಡಿ ಗುರುತಿಸಿದ್ದಾರೆ.

ನಿಪಿ-4 ದಾಖಲೆಗೆ ಈಗ್ಯ 2 ವರುಷದ ಹಿಂದೆ ಸಂಜೆ 4.00 ಗಂಟೆ ಸುಮಾರಿಗೆ ಚಾ ಸಾ 6 ರವರ ಮನೆಯ ಬಳಿ ಪೋಲಿಸರ ಹೇಳಿಕೆಯಂತೆ ಸಹಿ ಮಾಡಿದ್ದೆ. ಪೋಲಿಸರು ಹಿಂದಿನ ರಾತ್ರಿ ನಾವು ಸದರಿ ಸ್ಥಳದಲ್ಲಿ ಇದ್ದೆವು ಎಂದು ಸಾಕ್ಷಿಬೇಕೆಂದು ಹೇಳಿ ನನ್ನ ಸಹಿ ಪಡೆದು ಪೊಟೋ ತೆಗೆಸಿದ್ದರು. ಆ ಸಮಯದಲ್ಲಿ ಪೋಲಿಸರು ಸ್ಥಳದಿಂದ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಆ ಸಮಯದಲ್ಲಿ ಚಾ ಸಾ 3 ರವರು ಸಹ ಇದ್ದರು.

ನಾನು ಜಗಳವನ್ನು ಕಣ್ಣಾರೆ ನೋಡಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿಲ್ಲ ಹಾಗೂ ಹೇಳಿಕೆ ಪಡೆದಿಲ್ಲ.

( ಸ ಸ ಅ ರವರ ವಿನಂತಿ ಮೇರೆಗೆ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿಸಲಾಯಿತು)

**ಪಾಟೀ ಸವಾಲುಃ ಸ ಸ ಅ ರವರಿಂದಃ**

ದಿಃ 30.03.2022 ರಂದು ರಾತ್ರಿ 8.30 ರ ಸುಮಾರಿಗೆ ನಾನು ಹಾಗೂ ಚಾ ಸಾ 7 ಹಾಗೂ8 ರವರು ಆರೋಪಿತರ ಮನೆಯ ಹತ್ತಿರ ಮಾತನಾಡುತ್ತಾ ನಿಂತಿರುವಾಗ ಜಗಳವಾಗುವ ಶಬ್ದ ಕೇಳಿ ಅಲ್ಲಿಗೆ ಹೋದಾಗ 3 ಹಾಗೂ 4 ನೇ ಆರೋಪಿತರು ಚಾ ಸಾ 1 ಹಾಗೂ 4 ರಿಂದ 6 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರೆಂದರೆ ಎಂದರೆ ಸರಿಯಲ್ಲ. ಹಾಗೂ 1 ನೇ ಆರೋಪಿಯು

ಕಂದ್ಲಿಯಿಂದ ಹಾಗೂ 2 ನೇ ಆರೋಪಿಯು ಬಡಿಗೆಯಿಂದ ಚಾ ಸಾ 4 ಹಾಗೂ 6 ರವರಿಗೆ ಹೊಡೆದರು ಎಂದರೆ ಸರಿಯಲ್ಲ. 2 ನೇ ಆರೋಪಿಯು ಚಾ ಸಾ 5 ರವರಿಗೆ ಬಡಿಗೆಯಿಂದ ಬಲಗೈಗೆ ಹೊಡೆದರು ಎಂದರೆ ಸರಿಯಲ್ಲ. 3 ಹಾಗೂ 4 ನೇ ಆರೋಪಿತರು ಅವರೆಲ್ಲರಿಗೂ ಕೈಯಿಂದ ಹೊಡೆ ಬಡೆ ಮಾಡಿದರು ಎಂದರೆ ಸರಿಯಲ್ಲ. 1 ಹಾಗೂ 2 ನೇ ಆರೋಪಿತರು ಚಾ ಸಾ 1 ಹಾಗೂ 4 ರವರಿಗೆ ಸೀರೆ ಹಿಡಿದು ಎಳೆದಾಡಿ ಅವಮಾನ ಪಡಿಸಿದರು ಎಂದರೆ ಸರಿಯಲ್ಲ. ಆಗ ನಾನು ಚಾ ಸಾ 7 ರಿಂದ 9 ರವರು ಬಿಡಿಸಿ ಕಳುಹಿಸಿದೆವು ಎಂದರೆ ಸರಿಯಲ್ಲ. ಚಾ ಸಾ 1 ಹಾಗೂ 4 ರಿಂದ 6 ರವರಿಗೆ ಗಾಯಗಳು ಆಗಿದ್ದರಿಂದ ಕಿಮ್ಸ ಆಸ್ಪತ್ರೆಗೆ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಚಾ ಸಾ 1 ರವರು ದೂರು ನೀಡುವ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳ್ನು ಹೇಳಿ ನಾನು ದಿಃ 01.04.2022 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು **ನಿಪಿ-5** ಎಂದು ಗುರುತಿಸಲಾಯಿತು.

ದಿಃ01.04.2022 ರಂದು ಬೆ.8.30 ರಿಂದ 9.30 ಗಂಟೆಯ ಸಮಯದವರೆಗೆ ಪೋಲಿಸರು ಪಂಚನಾಮೆಗೆಂದು ನನ್ನನ್ನು ಆರೋಪಿತರ ಮನೆಯ ಮುಂದೆ ಕರೆಸಿದ್ದರು ಎಂದರೆ ಸಾಕ್ಷಿಯು ಅವರು ಕರೆದಿದ್ದರು ಆದರೆ ಯಾವ ವಿಚಾರಕ್ಕೆ ಎಂದು ತಿಳಿಸಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಚಾ ಸಾ 1 ರವರು ಹಾಜರಿದ್ದು ಆರೋಪಿತರು ತಮಗೆ ಅದೇ ಸ್ಥಳದಲ್ಲಿ ಹೊಡೆ ಬಡೆ ಮಾಡಿದ್ದೆಂದು ಹೇಳಿ ಸ್ಥಳವನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಚಾ ಸಾ 1 ರವರು ಆರೋಪಿತರು ಹೊಡೆಯಲು ಬಳಸಿದ್ದ ಒಂದು ಕಬ್ಬಿಣದ ಕಂದಲಿ ಹಾಗೂ ಪೀಕ ಜಾಲಿಯ ಹಿಡಿ ಗಾತ್ರದ ಬಡಿಗೆ ಪೋಲಿಸರಿಗೆ ಹಾಜರು ಪಡಿಸಿದ್ದರು ಎಂದರೆ ಸರಿಯಲ್ಲ. ಅವುಗಳನ್ನು ಪೋಲಿಸರು ಬಿಳಿ ಬಟ್ಟೆಯಲ್ಲಿ ಸುತ್ತಿ ನನ್ನ ಸಮಕ್ಷಮ ಜಪ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿ ನಿಪಿ-5 ರಂತೆ ಹೇಳಿಕೆ ನೀಡಿ ನಿಪಿ-4 ಪಂಚನಾಮೆಯ ಕಾಲಕ್ಕೆ ಸಹಕರಿಸಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿಗಳ ಪರ ವಕೀಲರಿಂದ ಃ**

ನಿಪಿ-4 ರಲ್ಲಿರುವ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ನಿಜ. ನಿಪಿ4 ರಲ್ಲಿ ಪೋಲಿಸರ ಹೇಳಿಕೆಯಂತೆ ಸಹಿ ಮಾಡಿದ್ದೇನೆ ಎಂದರೆ ನಿಜ. ಪೋಲಿಸರು ನನ್ನ ಸಹಿ ಪಡೆದು ಪೊಟೋ ತೆಗೆದಿರುವ ವಿಚಾರ ಹೊರತು ಪಡಿಸಿ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ ಎಂದರೆ ನಿಜ.

(ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ .ಹೇ .ಕೇ ಸರಿ ಇದೆ.

Sd/-

ಜೆ. ಎಮ್. ಎಫ್. ಸಿ. -II, ಹುಬ್ಬಳ್ಳಿ.

ಜೆ. ಎಂ. ಎಫ್. ಸಿ. II, ನ್ಯಾಯಾಲಯ, ಹುಬ್ಬಳ್ಳಿ.
ಸಿ.ಸಿ. ನಂಃ 2496/2022

PW: 05
CW: 03

| | |
|---|---|
| ಸಾಕ್ಷಿದಾರರ ಹೆಸರು | : ಹಜರೇಸಾಬ ಮುಲ್ಲಾ |
| ತಂದೆಯ ಹೆಸರು | : ಅಲ್ಲಾಸಾಬ |
| ವಯಸ್ಸು | : 45 ವರ್ಷ |
| ಉದ್ಯೋಗ | : ಶೇತ್ಕಿ |
| ವಾಸಸ್ಥಳ | : ಉಮಚಗಿ |

ಪ್ರಮಾಣ ವಚನವನ್ನು ಬೋದಿಸಲಾಯಿತು. ದಿನಾಂಕಃ 10.03.2026

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ಸಾಕ್ಷಿಯು ನಿಪಿ-4 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಹಿಯನ್ನು **ನಿಪಿ-4 ಬಿ** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ಹಾಗೂ 3 ಪೊಟೋಗಳಲ್ಲಿ ತಾನಿರುವುದಾಗಿ ನೋಡಿ ಗುರುತಿಸಿದ್ದಾರೆ.

ನಿಪಿ-4 ದಾಖಲೆಗೆ ಈಗ್ಯ 1 ವರುಷದ ಹಿಂದೆ ಮ.12.00 ಗಂಟೆ ಸುಮಾರಿಗೆ ಆರೋಪಿತರಮನೆಯ ಬಳಿ ಪೋಲಿಸರು ಬಂದಿದ್ದು ನಾನು ನೊಡಲು ಹೋದಾಗ ಸಹಿ ಪಡೆದು ಪೊಟೋ ತೆಗಸಿದ್ದರು. ಆ ಸಮಯದಲ್ಲಿ ಬಹಳ ಜನ ಇದ್ದರು. ಆ ಸಮಯದಲ್ಲಿ ಪೋಲಿಸರು ಸ್ಥಳದಿಂದ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ.

( ಸ ಸ ಅ ರವರ ವಿನಂತಿ ಮೇರೆಗೆ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿಸಲಾಯಿತು)

**ಪಾಟೀ ಸವಾಲುಃ ಸ ಸ ಅ ರವರಿಂದಃ**

ದಿಃ01.04.2022 ರಂದು ಬೆ.8.30 ರಿಂದ 9.30 ಗಂಟೆಯ ಸಮಯದವರೆಗೆ ಪೋಲಿಸರು ಪಂಚನಾಮೆಗೆಂದು ನನ್ನನ್ನು ಆರೋಪಿತರ ಮನೆಯ ಮುಂದೆ ಕರೆಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾ ಸಾ 1 ರವರು ಹಾಜರಿದ್ದು ಆರೋಪಿತರು ತಮಗೆ ಅದೇ ಸ್ಥಳದಲ್ಲಿ ಹೊಡೆ ಬಡೆ ಮಾಡಿದ್ದೆಂದು ಹೇಳಿ ಸ್ಥಳವನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಚಾ ಸಾ 1 ರವರು ಆರೋಪಿತರು ಹೊಡೆಯಲು ಬಳಸಿದ್ದ ಒಂದು ಕಬ್ಬಿಣದ ಕಂದಲಿ ಹಾಗೂ ಪೀಕ ಜಾಲಿಯ ಹಿಡಿ ಗಾತ್ರದ ಬಡಿಗೆ ಪೋಲಿಸರಿಗೆ ಹಾಜರು ಪಡಿಸಿದ್ದರು ಎಂದರೆ ಸರಿಯಲ್ಲ. ಅವುಗಳನ್ನು ಪೋಲಿಸರು ಬಿಳಿ ಬಟ್ಟೆಯಲ್ಲಿ ಸುತ್ತಿ ನನ್ನ ಸಮಕ್ಷಮ ಜಪ್ತು ಪಡಿಸಿಕೊಂಡಿದ್ದರು ಎಂದರೆ

ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ .ಹೇ .ಕೇ ಸರಿ ಇದೆ.

Sd/-

ಜೆ. ಎಮ್. ಎಫ್. ಸಿ. -II, ಹುಬ್ಬಳ್ಳಿ.